ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/472/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:26-08-2019.

**-:: ಸುತ್ತೋಲೆ ::-**

**ವಿಷಯ:-** 2019-10ನೇ ಸಾಲಿನ ಪ್ರಥಮ/ತೃತೀಯ ವರ್ಷ ಡಿಪ್ಲೋಮಾ ಪ್ರವೇಶಾತಿ ಸಂಬಂಧ ಸಂಗ್ರಹವಾಗಿರುವ ಅರ್ಜಿ ನೋಂದಣಿ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಸ್.ಬಿ ಖಾತೆಗೆ ಜಮೆ ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ. ಇಡಿ 111 ಟಿಪಿಇ 2018, ದಿ:22-05-2018.
2. ಈ ಕಛೇರಿ ಸಮ ಸಂಖ್ಯೆ ಅಧಿಸೂಚನೆ ದಿ:29-04-2019
3. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ಪತ್ರ ದಿ:02-05-2019.

-oooooo-

2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಸಂಬಂಧ ಅಭ್ಯರ್ಥಿಗಳು ಅರ್ಜಿ ನಮೂನೆಯ (ಸಾಮಾನ್ಯ/2ಎ/2ಬಿ/3ಎ/3ಬಿ = ರೂ.100/- & ಪ.ಜಾ/ಪ.ಪಂ/ ಪ್ರವರ್ಗ-1 = ರೂ.50/-) ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸಲು ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಅನುಮತಿ ನೀಡಲಾಗಿರುತ್ತದೆ.

ಅದರಂತೆ, ಉಲ್ಲೇಖ(3)ರ ಈ ಕಛೇರಿ ಪತ್ರದಲ್ಲಿ ಅರ್ಜಿ ನೋಂದಣಿ ಶುಲ್ಕದಿಂದ ಸಂಗ್ರಹವಾಗಿರುವ ಒಟ್ಟು ಹಣವನ್ನು ದಾಖಲಾತಿ ಪರಿಶೀಲನಾ ಕೇಂದ್ರದ ಪ್ರಾಂಶುಪಾಲರು ತಮ್ಮ ಪಿ.ಡಿ ಖಾತೆಗೆ ಜಮೆ ಮಾಡಿಕೊಂಡು, ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಸ್.ಬಿ. ಖಾತೆಗೆ ಜಮೆ ಮಾಡಲು ಕ್ರಮವಹಿಸಲು ಸೂಚಿಸಲಾಗಿತ್ತು.

ಪ್ರಯುಕ್ತ, ಅಭ್ಯರ್ಥಿಗಳು ಪ್ರವೇಶ ಬಯಸಿ ಪಾವತಿಸಿರುವ ಅರ್ಜಿ ನೋಂದಣಿ ಶುಲ್ಕದಿಂದ ಸಂಗ್ರಹವಾಗಿರುವ ಒಟ್ಟು ಹಣವನ್ನು ಪ್ರಾಂಶುಪಾಲರ ಪಿ.ಡಿ. ಖಾತೆಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಈ ಕೆಳಕಂಡ ಎಸ್.ಬಿ. ಖಾತೆಗೆ NEFT ಮುಖಾಂತರ ಕೂಡಲೇ ಜಮೆ ಮಾಡಲು ಮತ್ತೊಮ್ಮೆ ಸೂಚಿಸಲಾಗಿದೆ.

| ಬ್ಯಾಂಕ್ | ಖಾತೆಯ ಹೆಸರು | ಖಾತೆ ಸಂ. | ಐ.ಎಫ್.ಎಸ್.ಸಿ ಕೋಡ್ |
|---|---|---|---|
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಲ್ಲೇಶ್ವರಂ ಶಾಖೆ, ಬೆಂಗಳೂರು | **'ED-KEA-DCET-2019 Application Fee Collection Account** | **36843662415** | **SBIN0007080** |

ಮೇಲ್ಕಂಡ ಖಾತೆಗೆ ಜಮೆ ಮಾಡಿರುವ ಬಗ್ಗೆ ಮಾಹಿತಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು – 560 003. ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಸದರಿ ಮಾಹಿತಿಯ ಸಾಫ್ಟ್‌ಕಾಪಿಯನ್ನು ಇ-ಮೇಲ್ ವಿಳಾಸ: keauthority-ka@nic.in ಹಾಗೂ dteacm@hotmail.com / dteacmkar@gmail.com ಗೆ ಕಳುಹಿಸಲು ಸಹ ಸೂಚಿಸಲಾಗಿದೆ.

ನಿರ್ದೇಶಕರು

**ಇವರಿಗೆ,**

*ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ – ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.*

**ಪ್ರತಿ ಮಾಹಿತಿಗಾಗಿ:-**

1. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
2. ನಿರ್ದೇಶಕರ ಆಪ್ತಶಾಖೆಗೆ
3. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಸುತ್ತೋಲೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
4. ಕಛೇರಿ ಪ್ರತಿ.